## ಎನ್ಐಟಿಕೆ: ತರಬೇತಿ ಕಾರ್ಯಕ್ರಮದಲ್ಲಿ 31 ಪ್ರಮುಖ ಕಂಪನಿಗಳು ಭಾಗಿ

# ಗಣಿ ಸಂಸ್ಥೆ ಪ್ರತಿನಿಧಿಗಳಿಗೆ ಸುರಕ್ಷತೆಯ ಪಾಠ

ಪ್ರಜಾವಾಣಿ ವಾರ್ತೆ



ಸುರತ್ಕಲ್‌ನ ಎನ್‌ಐಟಿಕೆ ಸಂಸ್ಥೆಯಲ್ಲಿ ಸೋಮವಾರ ಆರಂಭವಾದ ಗಣಿಗಾರಿಕೆ ಸುರಕ್ಷತೆ ತರಬೇತಿ ಕಾರ್ಯಕ್ರಮದಲ್ಲಿ ದೇಶದ ಪ್ರಮುಖ ಗಣಿ ಕಂಪನಿಗಳ ಉನ್ನತ ಅಧಿಕಾರಿಗಳು ಭಾಗವಹಿಸಿದ್ದರು

ಮಂಗಳೂರು: ಗಣಿಗಾರಿಕೆ ಕಾರ್ಮಿಕರು ಕೆಲಸದ ಸ್ಥಳದ ಅಪಾಯಗಳನ್ನು ಗುರುತಿಸಿ ನಿಯಂತ್ರಿಸುವುದು ಹೇಗೆ? ಸುರಕ್ಷಿತ ಕಾರ್ಯವಿಧಾನಗಳನ್ನು ಹೇಗೆ ಅಳವಡಿಸಿಕೊಳ್ಳಬಹುದು, ರಕ್ಷಣಾ ಸಾಧನಗಳನ್ನು ಪರಿಣಾಮಕಾರಿಯಾಗಿ ಬಳಸುವ ಬಗೆ ಹೇಗೆ? ಸಂಸ್ಥೆಗಳು ಬಲವಾದ ಸುರಕ್ಷತಾ ಸಂಸ್ಕೃತಿಯನ್ನು ರೂಪಿಸಿಕೊಳ್ಳುವುದು ಹೇಗೆ?

ಗಣಿಗಾರಿಕೆ ವೃತ್ತಿಪರರಿಗೆ ಈ ಕುರಿತು ತಿಳಿವಳಿಕೆ ನೀಡಲು ಸುರತ್ಕಲ್‌ನ ರಾಷ್ಟ್ರೀಯ ತಾಂತ್ರಿಕ ಸಂಸ್ಥೆ- ಕರ್ನಾಟಕ (ಎನ್‌ಐಟಿಕೆ)ದ ಗಣಿಗಾರಿಕೆ ಎಂಜಿನಿಯರಿಂಗ್ ವಿಭಾಗವು ಹಮ್ಮಿಕೊಂಡಿರುವ ಒಂದು ವಾರದ ತರಬೇತಿ ಕಾರ್ಯಕ್ರಮಕ್ಕೆ ಸೋಮವಾರ ಚಾಲನೆ ನೀಡಲಾಯಿತು.

ಗಣಿಗಳ ಸುರಕ್ಷತಾ ಎಂಜಿನಿಯರಿಂಗ್ ತತ್ವಗಳು, ಗಣಿ ಸುರಕ್ಷತೆಯ ಮಹಾನಿರ್ದೇಶನಾ-ಯಲದ ಚೌಕಟ್ಟಿನಂತೆ ಅಪಾಯದ ವಿಶ್ಲೇಷಣೆ ಆಧರಿತ ನಿರ್ವಹಣಾ ವ್ಯವಸ್ಥೆಗಳು, ಅಪಘಾತ ವಿಶ್ಲೇಷಣೆಯ ಮಾನವ ಅಂಶಗಳು, ವರ್ತನೆ ಆಧರಿತ ಸುರಕ್ಷತೆ, ಶಬ್ದ ನಿಯಂತ್ರಣ, ಯಂತ್ರಗಳಿಂದ ಉಂಟಾಗುವ ಕಂಪನ, ಗಾಯದ ಡೇಟಾದ ಕಂಪ್ಯೂಟರ್ ಆಧರಿತ ವಿಶ್ಲೇಷಣೆ ಹಾಗೂ 2020ರ ವೃತ್ತಿ ಕಾರ್ಮಿಕರ ಸುರಕ್ಷತೆ, ಆರೋಗ್ಯ ಮತ್ತು ಕೆಲಸದ ಪರಿಸ್ಥಿತಿಗಳ ಸಂಹಿತೆ (ಒಎಸ್‌ಎಚ್‌ಡಬ್ಲ್ಯುಸಿ) ಜಾರಿಯಿಂದ ಗಣಿಗಾರಿಕೆ ಕ್ಷೇತ್ರದ ಮೇಲಾದ ಪರಿಣಾಮಗಳ ಕುರಿತು ಸಮಾಲೋಚನೆ ನಡೆಯಲಿದೆ.

ಕೋಲ್ ಇಂಡಿಯಾ ಲಿಮಿಟೆಡ್, ಸಿಂಗರೇಣಿ ಕೊಲಿಯರೀಸ್ ಕಂಪನಿ ಲಿಮಿಟೆಡ್, ಮಹಾನದಿ ಕೋಲ್‌ಫೀಲ್ಡ್ಸ್ ಲಿಮಿಟೆಡ್, ಸೆಂಟ್ರಲ್ ಕೋಲ್‌ಫೀಲ್ಡ್ಸ್ ಲಿಮಿಟೆಡ್, ವೆಸ್ಟರ್ನ್ ಕೋಲ್‌ಫೀಲ್ಡ್ಸ್ ಲಿಮಿಟೆಡ್, ಜೆಎಸ್‌ಡಬ್ಲ್ಯು ಸ್ಟೀಲ್ (ಗೋವಾ ಮತ್ತು ಚಿತ್ರದುರ್ಗ ಘಟಕಗಳು), ಫೊಮೆಂಟೊ ರಿಸೋರ್ಸಸ್ ಪ್ರೈವೇಟ್ ಲಿಮಿಟೆಡ್ (ಗೋವಾ), ಕರ್ನಾಟಕ ರಾಜ್ಯ ಖನಿಜ ನಿಗಮ ಲಿಮಿಟೆಡ್, ನ್ಯಾಷನಲ್ ಮಿನರಲ್ ಡೆವಲಪ್‌ಮೆಂಟ್ ಕಾರ್ಪೊರೇಷನ್, ಪನ್ನಾ ಡೈಮಂಡ್ ಪ್ರಾಜೆಕ್ಟ್, ಕಿರಂದುಲ್ ಮತ್ತು ಬೈಲಡಿಲಾ ಸಂಕೀರ್ಣ, ವೇದಾಂತ ಲಿಮಿಟೆಡ್ (ಕಬ್ಬಿಣದ ಅದಿರು), ಎನ್‌ಆರ್‌ಬಿ ಗ್ರೂಪ್ (ಗೋವಾ) ಮತ್ತು ಇಕೋಮೈನ್ ಮೈನಿಂಗ್ ಪ್ರೈವೇಟ್ ಲಿಮಿಟೆಡ್ ಸೇರಿದಂತೆ ದೇಶದ ಭಾಗಗಳ 31 ಗಣಿಗಾರಿಕೆ ವೃತ್ತಿಪರರ ಸಂಸ್ಥೆಗಳ ಉನ್ನತ ಅಧಿಕಾರಿಗಳು ಪಾಲ್ಗೊಂಡಿದ್ದಾರೆ.

ಎನ್‌ಐಟಿಕೆ ಸುರತ್ಕಲ್‌ನ ಉಪನಿರ್ದೇಶಕ ಪ್ರೊ.ಸುಭಾಷ್ ಸಿ. ಯಾರಗಲ್ ಅಧ್ಯಕ್ಷತೆ ವಹಿಸಿದ್ದರು. ಗಣಿಗಾರಿಕೆ ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಪ್ರೊ. ಹರ್ಷವರ್ಧನ್ ಭಾಗವಹಿಸಿದ್ದರು.

Prajavani, Date: 09/06/26, p. 03